# ಶ್ರೀ ಭಗವಾನ್ ಮಹಾವೀರ್ ಜೈನ್ ಕಾಲೇಜು, ವಿ.ವಿ. ಪುರಂ

| | | | |
|---|---|---|---|
| **ಪರೀಕ್ಷೆ:** | ಅಭ್ಯಾಸ ಪರೀಕ್ಷೆ | **ತಿಂಗಳು/ವರ್ಷ:** | 2020-2021 |
| **ತರಗತಿ:** | ದ್ವಿತೀಯ ಪಿ.ಯು.ಸಿ | **ವಿಷಯ:** | ಕನ್ನಡ |
| **ಅವಧಿ:** | 3:15 ಗಂಟೆಗಳು | **ಗರಿಷ್ಠ ಅಂಕಗಳು:** | 100 |

**I. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ಪೂರ್ಣವಾಕ್ಯದಲ್ಲಿ ಉತ್ತರಿಸಿ. (10x1=10)**

1. ಸೌಮಿತ್ರಿ ಎಂದರೆ ಯಾರು?
2. ಗುರು ಹೇಗೆ ವರ್ತಿಸಬಾರದು?
3. ತತ್ವಜ್ಞಾನವನ್ನು ಕೇಳದವರಾರು?
4. ಮಗು ಹುಟ್ಟಿದ್ದು ಎಲ್ಲಿ?
5. ಬಸಲಿಂಗನ ಕಾಯಿಲೆ ದೇಹದ ಮಟ್ಟದಿಂದ ಯಾವ ಸ್ತರವನ್ನು ತಲುಪತೊಡಗಿತ್ತು?
6. 'ಕಿಡ್ನಿಸ್ಟೋನ್' ಬಗ್ಗೆ ತಿಳಿಯಲು ಲೇಖಕಿ ಯಾರನ್ನು ಭೇಟಿ ಮಾಡಿದರು?
7. ಧಣಿಗಳ ಹೆಸರೇನು?
8. ರಹಮಾನ್ ಐ ವಿಟ್‌ನಸ್ ಎಂದು ಯಾರನ್ನು ತೋರಿಸಿದನು?
9. ಆನೆಶಾಸ್ತ್ರದವನು ಏನೆಂದು ಭವಿಷ್ಯ ನುಡಿದಿದ್ದನು?
10. ಆನೆ ಇಲ್ಲದ್ದರಿಂದ ವೇಲಾಯುಧ ಎಲ್ಲಿ ಕೆಲಸಕ್ಕೆ ಸೇರಿದ?

**II.ಅ) ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ. 2x4=8**

12. ಈಗಲೇ ಸೀತೆಯನ್ನು ರಾಮನಿಗೊಪ್ಪಿಸಲು ರಾವಣ ಬಯಸಲಿಲ್ಲವೇಕೆ?
13. ಶುಚಿ ಮತ್ತು ಸ್ವಾದಗಳನ್ನು ಕುರಿತು ಸೋಮನಾಥನ ಅಭಿಪ್ರಾಯವೇನು?
14. ಬಾನು ಮತ್ತು ಮರದ ನಿತ್ಯನೂತನತೆಯ ಬಗ್ಗೆ ಕವಿ ಏನು ಹೇಳಿದ್ದಾರೆ?
15. ಮುಂಬೈನ ಅವಸರದ ಜೀವನ ಚಿತ್ರಕ್ಕೆ ಎರಡು ಉದಾಹರಣೆ ನೀಡಿ

**ಆ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ. 2x3=6**

16. ಕನ್ನಡದ ಬಗ್ಗೆ ಮಾತನಾಡಲು ನಾವು ಯೋಗ್ಯತೆಗಳಿಸುವುದು ಯಾವಾಗ?
17. ಧಣಿಪತ್ನಿ ಬೆಳ್ಳಿಲೋಟವನ್ನು ಹೇಗೆ ಪರಿಚಯಿಸಿದ್ದಾಳೆ?
18. ಕಲಾಂ ಅವರು ತಾವು ಆತ್ಮಕಥೆ ಬರೆದುದು ಏತಕ್ಕಾಗಿ?
19. ಡಾII ಚಂದ್ರಪ್ಪ ಬಸಲಿಂಗನಿಗೆ ಡಾII ತಿಮ್ಮಪ್ಪನ ಬಗ್ಗೆ ಕೊಟ್ಟ ಅಭಿಪ್ರಾಯವೇನು?

**ಇ) ಯವುದಾದರೂ ಮೂರು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ. 2x3=6**

20. ದುರ್ಗಪ್ಪ ಏಕೆ ಬಂದಿರಬಹುದೆಂದು ನಿರೂಪಕರು ಯೋಚಿಸಿದರು?
21. ಸೊರಗಿದ್ದ ಆನೆಯನ್ನು ಕೃಷ್ಣೇಗೌಡ ಹೇಗೆ ಸಾಕಿದ?
22. ಫಾರೆಸ್ಟ್ ಡಿಪಾರ್ಟ್‌ಮೆಂಟಿನವರ ನಂಬರ್ ಒನ್ ಎನಿಮಗಳು ಯಾರು ಯಾರು?
23. ನಾಯನ್ನು ಕೊಲ್ಲದೆ ನೌಕರರು ಸಳ್ಳು ಹೇಳಿರುವರೆಂದು ನಿರೂಪಕರು ಯಾವ ಸಲಹೆ ನೀಡಿದರು?

**III.ಅ) ಯಾವುದಾದರೂ ಎರಡು ವಾಕ್ಯಗಳ ಸಂದರ್ಭ. ಸೂಚಿಸಿ, ಸ್ವಾರಸ್ಯ ವಿವರಿಸಿ. 3x2=6**

24. ಮರ್ಕಟನ ಕೈಯಲ್ಲಿ ಮಾಣಿಕ್ಯವಿದ್ದು ಫಲವೇನು?
25. ಹಗೆಗಳನು ಹಿಂಡಿದನು ಮನದೊಳಗೆ.
26. ಜ್ಯೋತಿ ನಿನ್ನಾ್ಯರ ಹೋಲರ.

**ಆ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿ. 3x1=3**

27. ದುರಂತದ ಮೂಲ ಬೀಜಗಳು ಚಹಾ ಗಿಡದ ರೂಪದಲ್ಲಿ ಬಂದವು.
28. ಕಾವಿಗೆ ಕೂತ ಹೇಂಟೆಯಂತೆ ಒಡಲು ಯಾವತ್ತೂ ವ್ಯಗ್ರ – ಪ್ರಕ್ಷುಬ್ಧ

**ಇ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. 3x2=6**

29. ಆನೆ ಸಾಕುವುದು ಎಂದರೆ ಎಲೆಕ್ಷನ್ನಿಗೆ ನಿಂತ ಹಾಗೆ.
30. ನಂಗೇನು ಈ ನಾಯಿಗಳನ್ನು ಕಂಡರೆ ಪ್ರೀತಿನಾ ಸ್ವಾಮಿ!

**IV.ಅ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 4x3=12**

31. ದ್ರೌಪದಿ ಅವಮಾನಕ್ಕೊಳಗಾದ ಮೂರು ಪ್ರಸಂಗಗಳನ್ನು ವಿವರಿಸಿ.
32. ವೀರ, ಮಂತ್ರಿ, ರಾಜ ಮತ್ತು ಯೋಗಿಗಳಿಗೆ ಇರಬೇಕಾದ ಅರ್ಹತೆಗಳೇನು?
33. ಬೆಳಗು ಜಾವ ಕವನದ ಮೂಲಕ ಕವಿ ಬೇಂದ್ರೆ ಹೇಳಿರುವ ವಿಚಾರಗಳಾವುವು?
34. ಯಾವ ಸ್ಥಳಗಳಲ್ಲಿ ಜೀಸಸ್ ದಿನ ನಿತ್ಯ ಶಿಲುಬೆ ಏರಿದ್ದಾನೆ? ಚರ್ಚಿಸಿ

**ಆ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 4x2=8**

35. ಬದುಕಿನಲ್ಲಿ ಆಯ್ಕೆಗಳು ಮುಖ್ಯ ಎಂಬುದನ್ನು ಲೇಖಕಿ ಹೇಗೆ ನಿರೂಪಿಸಿದ್ದಾರೆ?
36. ಚೆನ್ನಮ್ಮ ಬೆಳ್ಳಿಲೋಟವನ್ನು ಮತ್ತೆ ಹೊಳೆಗೆ ಎಸೆಯಲು ಕಾರಣವೇನು? ವಿಶ್ಲೇಷಿಸಿ.
37. ತಾಯಿ – ತಂದೆ ಶಿಕ್ಷಕರು ಸೇರಿ ಆದ ತ್ರಿಭುಜವೇ ಉತ್ತಮ ಬದುಕಿಗೆ ಆದರ್ಶ ಮಾದರಿ ಹೇಗೆ? ವಿವರಿಸಿರಿ.

**ಇ) ಯಾವುದಾದರು ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 4x2=8**

38. ಆನೆ ಮತ್ತು ಮಾವುತ ವೇಲಾಯುಧನನ್ನು ಸಾಗಹಾಕಲು ಮಠದವರು ಹವಣಿಸಿದ್ದೇಕೆ?
39. ಟೆಲಿಫೋನ್ ಲೈನ್-ಮನ್ ತಿಪ್ಪಣ್ಣನ ಸಾವಿನ ಸಂದರ್ಭವನ್ನು ವಿವರಿಸಿ.
40. ನಾಗರಾಜನ ನಿಗೂಢ ಸಾವಿನ ಬಗ್ಗೆ ಜನರ ಅಭಿಪ್ರಾಯಗಳೇನು?

**V. ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ. 5x1=5**

41. ಗುಣಪರಿಪಾಲನಾರ್ಥಮೆನಗಂ ಬಗೆದೋರಿದಳಿಲ್ಲ ದಿವ್ಯಭೂ
ಷಣವಸನಾಂಗರಾಗಮುಮನೊಲ್ಲದೆ ಖೇಚರ ರಾಜ್ಯಲಕ್ಷ್ಮಿಯಂ
ತೃಣಸಮನಾಗೆ ಭಾವಿಸದಳೀ ಸತಿಯುಂ ಮೊದಲಾಗೆ ಪೌರಷ
ಪ್ರಣಯಿಯೆನಿಂತ ಪೇಕ್ಷಿಸುವೆನೇ ಗುಣಹಾನಿಯನೆನ್ನ ಪಾಪದಿಂ

ಅಥವಾ

42. ಬಿಸಿಲಲ್ಲಿ ಬಳಲಿ ಬಂದವರಿಗೆ ನೆರಳಿಲ್ಲ
 ಹಸಿದು ಬಂದವರಿಗೆ ಹಣ್ಣು ಇಲ್ಲ
 ಕುಸುಮ ವಾಸನೆಯಿಲ್ಲ ಕೂಡಲು ಸ್ಥಳವಿಲ್ಲ
 ರಸದಲ್ಲಿ ಸ್ವಾದವು ವಿಷದಂತೆ ಇರತಿಹ

## ಭಾಷಾಭ್ಯಾಸ

**VI.ಅ) ಇವುಗಳಲ್ಲಿ ಯಾವುದಾದರೂ ಆರಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ. 2x6=12**

43. ಈ ಪದಗಳಿಗೆ ಅರ್ಥ ಬರೆಯಿರಿ
 1. ಊಳು 2.ಇಭ

44. ಈ ಪದಗಳ ನಾನಾರ್ಥ ಗಳನ್ನು ಬರೆಯಿರಿ
 1. ಸೂಳ್. 2.ಮುನಿ

45. ಈ ಪದಗಳ ತದ್ಭವ ರೂಪವನ್ನು ಬರೆಯಿರಿ
 1. ಪ್ರಯಾಣ 2.ವೀರ

46. ಈ ಕೆಳಗಿನ ಕ್ರಿಯಾಪದಗಳಲ್ಲಿ ಧಾತು ಗುರುತಿಸಿ
 1. ತಿಂದನು 2.ಹೋಯಿತು

47. ಈ ಪದಗಳ ಗುಣವಾಚಕವನ್ನು ಗುರುತಿಸಿ
 1. ನಸುಮಿಸುಕು 2. ಹೋಯಿತು

48. ಈ ಪದಗಳ ನಿಷೇದಾರ್ಥಗಳನ್ನು ಬರೆಯಿರಿ
 1. ಆಡಿತು 2. ತಿನ್ನು

49. ಈ ಪದಗಳ ವಿಭಕ್ತಿ ಪ್ರತ್ಯಯಗಳನ್ನು ತಿಳಿಸಿ
 1. ಧರೆಯೊಳ್ 2. ರಾವಣನೇ

**ಆ) ಇವುಗಳಲ್ಲಿ ಒಂದನ್ನು ಕರಿತು ಪ್ರಬಂಧವನ್ನು ಬರೆಯಿರಿ. 5x1=5**

50. ನಗರ ನೈರ್ಮಲ್ಯ ಕಾಪಾಡುವಲ್ಲಿ ನಾಗರಿಕರ ಪಾತ್ರ

51. ಅರಣ್ಯ ಮತ್ತು ವನ್ಯ ಜೀವಿ ಸಂರಕ್ಷಣೆ

**ಇ) ಪತ್ರಲೇಖನ: ಇವುಗಳಲ್ಲಿ ಒಂದನ್ನು ಕುರಿತು ಪತ್ರ ಬರೆಯಿರಿ. 4x1=4**

52. ನಿಮ್ಮ ಪರೀಕ್ಷಾ ಸಿದ್ದತೆಯನ್ನು ಕುರಿತು ತಾಯಿಗೆ ಪತ್ರ ಬರೆಯಿರಿ

53. ನಿಮ್ಮ ಊರಿನ ವಿದ್ಯುತ್ ದೀಪಗಳ ಸಮಸ್ಯೆಯನ್ನು ಕುರಿತು ಜಿಲ್ಲಾಧಿಕಾರಿಗಳಗೆ ಪತ್ರ ಬರೆಯಿರಿ

**ಈ) ಈ ಗಾದೆಗಳಲ್ಲಿ ಒಂದನ್ನು ವಿಸ್ತರಿಸಿ. 4x1=4**

54. ಬೆಳೆಯುವ ಸಿರಿ ಮೊಳಕೆಯಲ್ಲಿ

55. ತಾಳಿದವನು ಬಾಳಿಯಾನು.

***********